



ಇದೊಂದು ಅತ್ಯಾಕರ್ಷಕ ತೊರೆ. ಹಿಮಶೃಂಗದಿಂದ ಕರಗಿದ ನೀರು ಇಲ್ಲಿ ತೊರೆಯಾಗಿ ಹರಿದು ಸುಪೋರೆ ಸಮೀಪ ಝೀಲಮ್ ನದಿಯನ್ನು ಸೇರಿಕೊಳ್ಳುತ್ತದೆ. ಈ ತೊರೆಯ ಕೊನೆಯ ತುದಿಯನ್ನು ವೀಕ್ಷಿಸಲು ಇಲ್ಲಿರುವ ಕಾಳಿಂಗ ಸೇತುವೆಯ ಮಾರ್ಗವಾಗಿ ಸಾಗಬೇಕು.

ಗುಲ್‌ಮಾರ್ಗ್ ಪ್ರದೇಶದಲ್ಲಿ ಇನ್ನೂ ಎರಡು ಪ್ರಸಿದ್ಧ ತೊರೆಗಳಿವೆ. ವೇರಿನಾಗ್ ಹಾಗೂ ಫಿರೋಜ್ಪುರ್ ನಾಲಾಗಳು. ಈ ವೇರಿನಾಗ್ ತೊರೆಯಲ್ಲಿ ಹರಿಯುವ ನೀರು ಅತ್ಯಂತ ಶುದ್ಧ ಹಾಗೂ ಸ್ವಚ್ಛ. ಇದು ಔಷಧೀಯ ಗುಣಗಳನ್ನು ಹೊಂದಿದೆ ಎಂಬ ಗಾಢವಾದ ನಂಬಿಕೆ ಇಲ್ಲಿದೆ. ಈ ಗಿರಿಧಾಮದಲ್ಲಿ ಇನ್ನೊಂದು ಅದ್ಭುತವಾದ ತಾಣ ಲೀನ್ ಮಾರ್ಗ. ಇದು ಪೈನ್ ಮರಗಳಿಂದ ಆವೃತ್ತವಾದ ದಟ್ಟಾರಣ್ಯದ ಪ್ರದೇಶ. ಸ್ಥಳ ವೀಕ್ಷಣೆಗೆ ಹಾಗೂ ಶಿಬಿರ ಹೂಡಲು ಹೇಳಿ ಮಾಡಿಸಿದ ತಾಣವಾಗಿದೆ. ಇನ್ನು ಇಲ್ಲಿರುವ ಅಲ್‌ಪಥೇರ್ ಕೆರೆ ಕೂಡ ಆಕರ್ಷಕ. ಈ ಕೆರೆ ಗುಲ್‌ಮಾರ್ಗ್ ನಿಂದ ಕೇವಲ 13 ಕಿ.ಮೀ ಅಂತರದಲ್ಲಿದೆ. ವರ್ಷದುದ್ದಕ್ಕೂ ನೀರಿನಿಂದ ತುಂಬಿರುತ್ತದೆ ಎಂದು ಸ್ಥಳೀಯರು ಹೇಳುತ್ತಾರೆ. ಬೇಸಿಗೆಯಲ್ಲಿ ಮಂಜುಗಡ್ಡೆಯ ತುಂಡುಗಳ ರೂಪದಲ್ಲಿ ಬೆಟ್ಟದಿಂದ ಕೆಳಗೆ ಹರಿದು ಬರುವುದನ್ನು ನೋಡುವುದೇ ಒಂದು ಅದ್ಭುತವಾದ ಅನುಭವ.

ಗುಲ್‌ಮಾರ್ಗ್‌ನ ಇನ್ನೊಂದು ಪ್ರವಾಸಿ ಆಕರ್ಷಣೆಯೆಂದರೆ ಇಲ್ಲಿರುವ ಗೋಂಡೋಲಾ ರೈಡ್. ಇಲ್ಲಿ ಕೇಬಲ್ ಕಾರ್ ವ್ಯವಸ್ಥೆ ಇದೆ. ಐದು ಕಿ.ಮೀ ದೂರದವರೆಗೆ ಕೇಬಲ್ ಕಾರ್ ಮೂಲಕವೇ ಸಾಗಬಹುದು. ಇದು ಗುಲ್‌ಮಾರ್ಗ್‌ದಿಂದ ಕೊಂಗದೂರ್‌ಗೆ ತಲುಪಲು ಹಾಗೂ ಕೊಂಗದೂರ್ ನಿಂದ ಅಪರ್ವತ ತಲುಪುವ ಮಾರ್ಗವಾಗಿದೆ. ಬಾಬಾ ರಿಷಿ ಮಂದಿರ, ಫಿಶಿಂಗ್ ಪಾಂಡ್, ಬನಿಬಲ್ ನಾಗ್, ಕೋವತೂರು ನಾಗ್ ಹಾಗೂ ಸೋನಾಮಾರ್ಗ್ ಒಂದು ದಿನದ ಪಿಕ್‌ನಿಕ್‌ಗೆ ಹೇಳಿ ಮಾಡಿಸಿದ ತಾಣಗಳಂತಿವೆ. ಇಲ್ಲಿರುವ ಸೋನಾಮಾರ್ಗ್ ಚಿನ್ನದ ಬೀಡು ಎಂದು ಹೆಸರಾಗಿದೆ. ಇಲ್ಲಿಂದ ಅಮರನಾಥ್ ಗುಹೆಗಳನ್ನು ವೀಕ್ಷಿಸಬಹುದು.

ಗುಲ್‌ಮಾರ್ಗ್‌ನ ಅಬಚಲ್: ಇದೊಂದು ಸುಂದರ ತಾರಸಿ ಉದ್ಯಾನವನ. ಇದು ಮುಘಲ್ ಬಾದಶಹ ಜಹಾಂಗೀರನ ಪತ್ನಿ ನೂರ್‌ಹಾನ್‌ನಿಂದ ನಿರ್ಮಾಣ ಗೊಂಡಿದೆ. ಇದೊಂದು ಹಚ್ಚ ಹಸಿರಿನಿಂದ ಕೂಡಿದ ಲಾನ್. ಇಲ್ಲಿ ಚಿನಾರ್ ಮರಗಳಿವೆ. ಕಾರಂಜಿಗಳಿಂದ ಉದ್ಯಾನವನದ ಸೌಂದರ್ಯ ಇಮ್ಮಡಿಯಾಗಿದೆ. ಜಲಪಾತದ ನೀರು ಇಲ್ಲಿಗೆ ಹರಿದು ಬರುವಂತೆ ವ್ಯವಸ್ಥೆ ಮಾಡಲಾಗಿದೆ. ಈ ಉದ್ಯಾನವನಕ್ಕೆ ಬಾಗ್–ಎ–ಬೇಗಮ್ ಅಬದ್ ಎಂದು



ಕರೆಯಲಾಗುತ್ತಿತ್ತು. ಈಗ ಇದನ್ನು ಸಾಹೀಬ್ ಅಬದ್ ಎಂದು ಗುರುತಿಸುತ್ತಾರೆ. ಇಲ್ಲೊಂದು ಮಸೀದಿಯನ್ನೂ ಕಾಣಬಹುದು.

ಅಲ್‌ಪಥೇರ್ ಕೆರೆ: ತ್ರಿಕೋನಾಕಾರದಲ್ಲಿರುವ ಈ ಕೆರೆ ಪರ್ವತಗಳಿಂದ ಆವೃತ್ತವಾಗಿದೆ. ಅತ್ಯಂತ ರಮಣೀಯವಾಗಿದೆ. ಕುದುರೆ ಸವಾರಿ ಪ್ರಿಯರಿಗೆ ಇಷ್ಟದ ತಾಣವಿದು.

ಗುಲ್‌ಮಾರ್ಗ್‌ನಲ್ಲಿರುವ ದುಂಗ್ರಿ ತಾಣದಲ್ಲಿರುವ ತೊರೆಯಲ್ಲಿ ಮೀನು ಹಿಡಿಯಲು ಅವಕಾಶವಿದೆ. ಇಲ್ಲಿ ಪಾಂಡವರ ಪುರಾತನ ದೇವಾಲಯವಿದೆ. ಇಲ್ಲಿನ ಮಹಾರಾಣಿ ದೇವಸ್ಥಾನ ಮೋಹಿನೇಶ್ವರ ಶಿವಾಲಯ ಎಂತಲೂ ಪ್ರಸಿದ್ಧಿಯಾಗಿದೆ. ಇಲ್ಲಿ ಶಿವ ಹಾಗೂ ಪಾರ್ವತಿಯರ ವಿಗ್ರಹಗಳಿವೆ.

ಗುಲ್‌ಮಾರ್ಗ್‌ನಿಂದ ಕೇವಲ 10 ಕಿ.ಮೀ ಅಂತರದಲ್ಲಿರುವ ಲೀನ್ ಸಮತಟ್ಟಾದ ಪ್ರದೇಶ. ಕ್ರೀಡಾಚಟುವಟಿಕೆಯಲ್ಲಿ ಆಸಕ್ತಿಯುಳ್ಳವರು ಇಲ್ಲಿ ಹೆಚ್ಚಾಗಿ ಕಾಣಸಿಗುತ್ತಾರೆ. ಇಲ್ಲಿಗೆ ಸಮೀಪದಲ್ಲಿ ಪೈನ್ ಮರಗಳ ದಟ್ಟವಾದ ಅರಣ್ಯ ಪ್ರದೇಶವಿದೆ. ಇಲ್ಲಿರುವ ನಿಂಗ್ಲಾ ನಾಲಾದಲ್ಲಿ ಜಲಕ್ರೀಡೆಗೆ ಅವಕಾಶವಿದೆ.

ತಲುಪುವ ಮಾರ್ಗ: ಗುಲ್‌ಮಾರ್ಗ್‌ಗಿರಿಧಾಮವನ್ನು ತಲುಪಲು ದೇಶದ ಪ್ರಮುಖ ನಗರಗಳಿಂದ ಸಾರಿಗೆ, ವಿಮಾನ, ರೈಲುಗಳ ವ್ಯವಸ್ಥೆ ಇದೆ. ಶ್ರೀನಗರ ಹತ್ತಿರದ ವಿಮಾನ ನಿಲ್ದಾಣ. ಟ್ಯಾಕ್ಸಿ ಅಥವಾ ಕ್ಯಾಬ್‌ಗಳ ಮೂಲಕ ತಲುಪಬಹುದು. ●